ನಿಜ ಹೇಳು ರಾಜೇಶ್, ಆಕೆ ತಾಯಿ ಆಗದಿರಲು ಕಾರಣವೇನು?' ಎಂದರು.

'ಡಾಕ್ಟರುಗಳಿಗೆ ತೋರಿಸಿದೆ ಅಪ್ಪಾ. ಔಷಧಿಗಳನ್ನು ಕೂಡ ಉಪಯೋಗಿಸಿದೆವು. ಆದರೂ ಪ್ರಯೋಜನ ಇಲ್ಲವಾಯಿತು. ಅದು ನಿಮಗೆ ಕೂಡ ಗೊತ್ತಿದೆ' ಎಂದ ರಾಜೇಶ್.

'ನನಗೆ ಇನ್ನೂ ಹೆಚ್ಚು ಗೊತ್ತು ರಾಜೇಶ್. ಭಾರತಿಯೊಂದಿಗೆ ನಿನ್ನ ಮದುವೆ ನಿಶ್ಚಯವಾದೊಡನೆ, ನಿನ್ನ ಮಗನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೇನೋ ಎಂಬ ಭಯದಿಂದ ನೀನು ಹೋಗಿ ವ್ಯಾಸೆಕ್ಟಮಿ ಆಪರೇಷನ್ ಮಾಡಿಸಿಕೊಂಡೆ. ಅಲ್ಲಿ ನಿನಗೆ ಆಪರೇಷನ್ ಮಾಡಿದ ಡಾಕ್ಟರ್ ನನಗೆ ಪರಿಚಿತ. ಮೊನ್ನೆ ಭೇಟಿ ಮಾಡಿದಾಗ ಹೇಳಿದ. ನನಗೆ ಆಶ್ಚರ್ಯ ಆಗಲಿಲ್ಲ. ಅಸಹ್ಯವಾಯಿತು'.

ರಾಜೇಶ್‌ನ ಮುಖ ರಕ್ತವಿಲ್ಲದಂತೆ ಬಿಳಿಚಿಕೊಂಡಿತು. ಮಾತಾಡಲಿಲ್ಲ. ಹೊಸ ವಿಷಯ ತಿಳಿದ ಅತ್ತೆ ದಿಗ್ಭ್ರಾಂತರಾಗಿ ನೋಡುತ್ತಿದ್ದರು.

ನಾನು ನನ್ನ ಗಂಡನತ್ತ ನೋಡುತ್ತಿದ್ದೆ. ನಮ್ಮ ಮನೆಗೆ ಬಂಧುಗಳು, ಸ್ನೇಹಿತರು ಬಂದಾಗ ಮಕ್ಕಳ ವಿಷಯ ಬರುತ್ತಿತ್ತು. ಕೊಂಚ ಜನ ಒಳ್ಳೆಯ ಫರ್ಟಿಲಿಟಿ ಕ್ಲಿನಿಕ್‌ಗಳನ್ನು ಸೂಚಿಸಿದರು. ಮೂಲಿಕಾ ವೈದ್ಯದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಎಲ್ಲರೂ ನನ್ನತ್ತ ಸಹಾನುಭೂತಿಯಿಂದ ನೋಡುತ್ತಿದ್ದರು. 'ನನಗೆ ಮಕ್ಕಳು ಹುಟ್ಟಿಲ್ಲ' ಎಂಬ ಪ್ರಸ್ತಾಪ ಯಾವಾಗ ಬಂದರೂ, 'ನನ್ನ ಅಸಮರ್ಥತೆಯನ್ನು ಕ್ಷಮಿಸುವ ಉದಾರ ಹೃದಯಿಯಂತೆ' ನನ್ನ ಗಂಡ ಬಿಲ್ಡಪ್ ಕೊಡುತ್ತಿದ್ದ.

ನನ್ನ ಗಂಡ ಇಷ್ಟು ಚೆನ್ನಾಗಿ ನಟಿಸಬಲ್ಲ ಎಂದು ನಾನು ಊಹಿಸಿರಲೇ ಇಲ್ಲ. ನನ್ನ ತಂದೆ ಕೂಡ ಅಷ್ಟೇ. ಉದ್ಯೋಗ ಮಾಡುತ್ತಿದ್ದಷ್ಟು ಕಾಲ ಸಂಬಳ ತೆಗೆದುಕೊಳ್ಳುತ್ತಿದ್ದ. ಮದುವೆ ಮಾಡಿಕೊಳ್ಳುವೆನೆಂದು ತಿಳಿದು ಎರಡನೇ ಮದುವೆಯವನು ಎಂಬ 'ನೆಪ'ದಿಂದ ಬೈದ. ನನ್ನ ಸೇವಿಂಗ್ಸ್ ಎಲ್ಲವನ್ನೂ ಕಳಿಸಿದ್ದಕ್ಕೆ ತಣ್ಣಗಾಗಿದ್ದ. ಆ ನಂತರ ಕನಿಷ್ಠ ನಾನು ಹೇಗೆ ಸಂಸಾರ ಮಾಡುತ್ತಿರುವೆನೆಂದು ಒಂದು ಮಾತೂ ಕೂಡ ಕೇಳಲಿಲ್ಲ.

ಈ ಕಹಿ ಸತ್ಯಗಳನ್ನು ಒಪ್ಪಿಕೊಳ್ಳಲು ನನ್ನ ಮನಸ್ಸೇಕೋ ಸಂಶಯಿಸುತ್ತಿತ್ತು. ನನ್ನಲ್ಲಿ ಇನ್ನೂ ಪತಿವ್ರತಾ ಲಕ್ಷಣಗಳು ಕೆಲವು ಇದ್ದಂತಿದ್ದವು. 'ನನ್ನ ಗಂಡ, ನನ್ನ ಮಕ್ಕಳು, ಅತ್ತೆ ಮಾವಂದಿರು, ನಾದಿನಿಯರು... ಇದು ನನ್ನ ಕುಟುಂಬ. ಜೀವನಪರ್ಯಂತ ಇವರೊಂದಿಗೇ ನನ್ನ ಬಂಧ ಮುಂದುವರಿಯತ್ತದೆ' ಎನ್ನುವ ಭಾವನೆ ಚೆನ್ನಾಗಿತ್ತು.

ಬಹುಶಃ ಶೇಕಡ ತೊಂಬತ್ತು ಗೃಹಿಣಿಯರು ಹೀಗೆಯೇ ಯೋಚಿಸುವವರೇನೋ. ಮುಗ್ಧತೆ ನೀಡುವ ಆನಂದವನ್ನು ಜ್ಞಾನ ಕೊಡದು. ತನ್ನನ್ನು



ತಾನು ಮುಚ್ಚಿಟ್ಟುಕೊಂಡು ಮತ್ತೊಬ್ಬರಿಗಾಗಿ ಬದುಕುವುದೇ ಉತ್ತಮ ಗೃಹಿಣಿಯ ಲಕ್ಷಣ ಎಂದು ಭಾವಿಸದೇ, 'ಇವೆಲ್ಲವೂ ಬಂಧುತ್ವಗಳಾ? ಬಾಧ್ಯತೆಗಳಾ?' ಎಂದು ಆಲೋಚಿಸಿದರೆ ಉತ್ತರಗಳು ದೊರಕವು.

'ಬಂಜೆ ಎಂದು ಅವಳನ್ನು ಅವಮಾನಿಸಿದವರನ್ನು ಸಮರ್ಥಿಸುತ್ತಾ, ಆಕೆಯನ್ನು ಬಂಜೆಯನ್ನು ಮಾಡಿದ ನಿನ್ನನ್ನು ಅಂದವಾಗಿ ಸಮರ್ಥಿಸಿಕೊಂಡೆ' ಎಂದರು ಮಾವ. '...ನಿನ್ನೆ ರಾತ್ರಿ ಈ ವಿಷಯಗಳನ್ನೆಲ್ಲಾ ನಿನ್ನ ಹೆಂಡತಿಗೆ ಹೇಳಿದ್ದೇನೆ. ಆಕೆ ನಮ್ಮೊಂದಿಗೆ ಬಂದುಬಿಡಲು ಸಿದ್ಧವಾದಳು. ರಾತ್ರಿಯೇ ನಾವು ಹೊರಡಲಿದ್ದೇವೆ.'

ರಾಜೇಶ್ ಏನೋ ಹೇಳಲು ಹೋದ.

'ಮಾತಾಡಬೇಡ ರಾಜೇಶ್. ನಾನು ಹೇಳುವುದನ್ನು ಪೂರ್ತಿ ಕೇಳು. ನಿನಗೆ ನಿನ್ನ ಮಗನೆಂದರೆ ಪ್ರಾಣ. ಭಾರತಿ ಅವನನ್ನು ಹೆತ್ತ ತಾಯಿಗಿಂತ ಚೆನ್ನಾಗಿ ನೋಡಿಕೊಳ್ಳುವಳೆಂಬ ನಂಬಿಕೆ ಉಂಟಾದೊಡನೆ ಮದುವೆಗೆ ಒಪ್ಪಿಕೊಂಡೆ. ಆದರೆ ತನಗೊಂದು ಒಳ್ಳೆಯ ಕುಟುಂಬ ಬೇಕೆಂದು ಈ ಮದುವೆಗೆ ಭಾರತಿ ಒಪ್ಪಿಕೊಂಡಳು. ತನಗೆ ಮತ್ತೊಂದು ಮಗು ಹುಟ್ಟಿದರೆ ನಿನ್ನ ಮಗನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೇನೋ ಎಂಬ ಭಯದಿಂದ, ಮದುವೆಗೆ ಮೊದಲೇ ಆಪರೇಷನ್ ಮಾಡಿಸಿಕೊಂಡೆ. ಭಾರತಿ ಬ್ಯಾಂಕಿನಲ್ಲಿದ್ದಿದ್ದರೆ ಅಲ್ಲಿಯೇ ಆಫೀಸರ್ ಆಗಿರುತ್ತಿದ್ದಳು. ಒಂದು ಹಸುಗೂಸನ್ನು ಅಮ್ಮನಂತೆ ಬೆಳೆಸಬೇಕೆಂಬ ಆಸೆಯಿಂದ ಒಳ್ಳೆಯ ಉದ್ಯೋಗವನ್ನು ಬಿಟ್ಟುಬಿಟ್ಟಳು. ಇಪ್ಪತ್ತೈದು ವರ್ಷಗಳಿಂದ ನಿನ್ನ ಕುಟುಂಬವನ್ನು ನಡೆಸುತ್ತಿದಾಳೆ. ಟ್ಯೂಷನ್‌ಗಳಿಂದ ಹಣ ಸಂಪಾದಿಸಿ ನಿನಗೆ ಸಹಾಯವಾಗಿ, ಬೆಂಬಲವಾಗಿ ನಿಂತಳು. 'ಕುಟುಂಬ ಎಂದ ಮೇಲೆ ಯಾರ ಹಣವಾದರೆ ಏನಂತೆ?' ಎಂಬ ಸಿಹಿಯಾದ ನೆಪದಿಂದ, ನಿನ್ನ ಮಾವನ ಮನೆಯವರ ಮೆಚ್ಚುಗೆ ಪಡೆಯಲೆಂದು ನಿನ್ನ ಸೊಸೆಗೆ ಒಡ್ಯಾಣ, ನೆಕ್ಲೇಸುಗಳನ್ನು ಭಾರಿಯಾಗಿ ಮಾಡಿಸಿ, ಅದಕ್ಕೆ ನಿನ್ನ ಹೆಂಡತಿಯ ಚಿನ್ನವನ್ನು ಕೂಡ ಅಡವಿಟ್ಟೆ. ಈಗ ಅವಳ ಬಳಿ ಕವಡೆಕಾಸು ಕೂಡ ಇಲ್ಲ. ಆಕೆ ಮಾಡಿದ ತ್ಯಾಗಕ್ಕೆ ನೀವು ನೀಡಿದ ಬಹುಮಾನ ಆಕೆಯ ಕುಲವನ್ನು, ಬಡತನವನ್ನು, ಎತ್ತಿ ತೋರಿಸಿ ಚುಚ್ಚಿ ಮಾಡಿದ ಅವಮಾನ, ಅವಹೇಳನ..!'

ಬೀಗಿತ್ತಿಯ ಮುಖ ಸಂಪೂರ್ಣವಾಗಿ ಪೆಚ್ಚಾಗಿತ್ತು. ಅನೂಷ ಬಿಳಿಚಿಕೊಂಡು ನೋಡುತ್ತಿದ್ದಳು.

***

ನಾವು ಮನೆಯ ಹೊರಗೆ ಹೆಜ್ಜೆ ಇಡಲು ಸಿದ್ಧವಾಗುತ್ತಿದ್ದಾಗ ಆಕಾಶ್ ಬಂದು, 'ಅಮ್ಮಾ...' ಎಂದ. ಅವನ ಧ್ವನಿಯಲ್ಲಿನ ದುಃಖ ತಿಳಿಯುತ್ತಿತ್ತು. ಅವನ ತಲೆಯನ್ನು ನೇವರಿಸಿ ಹೊರಗೆ ನಡೆದೆ.

ಈಗ ಇದು ನನ್ನ ಮೂರನೆಯ ಪ್ರಯಾಣ.

ಮೊದಲನೆಯದು ತಂದೆಯನ್ನು ತ್ಯಜಿಸಿ ಉದ್ಯೋಗಕ್ಕೆ, ಎರಡನೆಯ ಪ್ರಯಾಣ ಉದ್ಯೋಗವನ್ನು ತ್ಯಜಿಸಿ ಗಂಡನ ಬಳಿಗೆ, ಮೂರನೆಯ ಪ್ರಯಾಣ ಗಂಡನನ್ನು ತ್ಯಜಿಸಿ ನನ್ನ ಸಂತೋಷಕ್ಕೆ. ನಾನು ತೆಗೆದುಕೊಂಡ ನಿರ್ಧಾರ ಸರಿಯಾದದ್ದಲ್ಲವೆಂದು ಕೆಲವರಿಗೆ ಅನಿಸಬಹುದು. ಕೆಲವು ಸ್ತ್ರೀಯರು ಜೀವನವನ್ನು ಹಗುರವಾಗಿ ಕಳೆಯುತ್ತಿರುತ್ತಾರೆ. ನಾನು ಕೂಡ ಇಪ್ಪತ್ತೈದು ವರ್ಷ ಹಾಗೆಯೇ ಮಾಡಿದೆ. ನನ್ನವರು ಮನಸ್ಸನ್ನು ಗಾಯಗೊಳಿಸಿರದಿದ್ದರೆ ಬಹುಶಃ ಜೀವನಪೂರ್ತಿ ಹಾಗೆಯೇ ಇದ್ದುಬಿಡುತ್ತಿದ್ದೆನೇನೋ. 'ಸಿಹಿಯಾದ ನೆಪ'. ದೋಚಿಕೊಳ್ಳಲು ಸರಿಯಾದ ಪದ.

ನನ್ನ ಆಲೋಚನೆಗಳನ್ನು ಗಮನಿಸುತ್ತಾ ಮಾವನವರು, 'ಏನಮ್ಮಾ ಅಷ್ಟೊಂದು ಆಲೋಚನೆ? ನಮಗೆ ಆರ್ಥಿಕವಾಗಿ ಯಾವ ತೊಂದರೆಯೂ ಇಲ್ಲ. ನಮ್ಮ ಮನೆಯ ಪಕ್ಕದಲ್ಲಿರುವ ಅನಾಥಾಶ್ರಮದಲ್ಲಿ ಮಕ್ಕಳಿಗೆ ನಾನು ಕಥೆಗಳನ್ನೂ, ಸುದ್ದಿಗಳನ್ನೂ ಹೇಳಿ ಅವುಗಳ ಲಾಲನೆ ಪಾಲನೆ ನೋಡಿಕೊಳ್ಳುತ್ತಿರುತ್ತೇನೆ. ನೀನು ಕೂಡ ಅವರಿಗೆ ಪಾಠಗಳನ್ನು ಕಲಿಸು. ನಿನಗೆ ಬಹಳ ಸಂತೃಪ್ತಿಯನ್ನು ನೀಡುತ್ತದೆ' ಎಂದರು.

'ಖಂಡಿತ ಮಾವಾ' ಎಂದೆ. 'ಈಗ ಟ್ಯೂಷನ್‌ಗಳು ಕೂಡ ಆನ್‌ಲೈನ್‌ನಲ್ಲೇ ತಾನೇ. ಹಾಗೆ ನಾವು ಹೆಚ್ಚಿನ ಜನಕ್ಕೆ ಸಹಾಯ ಮಾಡಬಲ್ಲೆವು' ಎಂದೆ ಲ್ಯಾಪ್‌ಟಾಪ್‌ನತ್ತ ಸ್ವಲ್ಪ ಹೆಮ್ಮೆಯಿಂದ ನೋಡುತ್ತಾ. ಮೇಲೆ ನನ್ನ ಹೆಸರು ಕಾಣಿಸುತ್ತಿತ್ತು. ಎಸ್. ಭಾರತಿ..! ಅಂದ ಹಾಗೆ ನನ್ನ ಪೂರ್ತಿ ಹೆಸರು ನಿಮಗೆ ಹೇಳಲಿಲ್ಲ ಅಲ್ಲವಾ? ಆಗಸ್ಟ್ ಹದಿನೈದರಂದು ಹುಟ್ಟಿದ್ದಕ್ಕೋ ಏನೋ ನನಗೆ ಆ ಹೆಸರಿಟ್ಟರು. ನನ್ನ ಹೆಸರು ಸ್ವತಂತ್ರ ಭಾರತಿ.

ಪ್ರತಿಕ್ರಿಯಿಸಿ: feedback@sudha.co.in